ಒಳ್ಳೆಯವಳೆಂದು ಮಾದನಿಗೆ ಮೊದಲ ಬಾರಿ ಅನ್ನಿಸಿತು.

ಮರುದಿನ ಕಚೇರಿಗೆ ಹೋಗಿ ಸಾಹೇಬರಿಗೆ ಮೆಸ್ಸಿನಿಂದ ತಿಂಡಿ, ಊಟ ತಂದುಕೊಡುತಿದ್ದ ಕಚೇರಿ ಸೇವಕನ ಕಿವಿಯಲ್ಲಿ ರಾತ್ರಿ ಸಾಹೇಬರಿಗೆ ಬಿರಿಯಾನಿ ತಲುಪಿಸುತ್ತೇನೆಂದು ದೈನ್ಯತೆಯಿಂದ ಸುದ್ದಿ ಮುಟ್ಟಿಸಿದ ಮಾದ ಮಧ್ಯಾಹ್ನದ ನಂತರ ಮನೆಗೆ ಬಂದು ಎಲ್ಲಾ ವ್ಯವಸ್ಥೆ ಮಾಡಿದ. ರಾತ್ರಿ ಎಂಟು ಗಂಟೆಗೆ ಸರಿಯಾಗಿ ಫಾತಿಮಕ್ಕಳ ಮನೆಯಿಂದ ಹೊಸ ಡಬ್ಬಿಯಲ್ಲಿ ನಿಂಗಿ ತಂದ ಘಮಗುಡುತಿದ್ದ ಬಿಸಿಬಿಸಿ ಬಿರಿಯಾನಿ ಕಂಡು ಮಾದನಿಗೆ ನನ್ನ ಕೆಲಸ ಉಳಿಯಿತು ಎಂದು ಸಂತೋಷವಾಯಿತು. ಹೊಸ ಡಬ್ಬಿಯಲ್ಲಿ ತುಂಬಿ ಉಳಿದ ಬಿರಿಯಾನಿಯನ್ನು ಫಾತಿಮಕ್ಕ ಮಕ್ಕಳಿಗೆಂದು ಸಣ್ಣ ಡಬ್ಬಿಯೊಂದರಲ್ಲಿ ಹಾಕಿಕೊಟ್ಟಿದ್ದಳು. ಇಬ್ಬರೂ ಮಕ್ಕಳೂ ಅದರಲ್ಲಿದ್ದ ರುಚಿಯಾದ ಬಿರಿಯಾನಿಯನ್ನು ಕ್ಷಣ ಮಾತ್ರದಲ್ಲಿ ಖಾಲಿ ಮಾಡಿ ಮತ್ತಷ್ಟು ಸಿಗುತ್ತದೇನೋ ಎಂದು ಆಸೆಗಣ್ಣುಗಳಿಂದ ಹೊಸ ಡಬ್ಬಿಯತ್ತ ನೋಡತೊಡಗಿದವು. ಹೊಸ ಡಬ್ಬಿಯ ಮುಚ್ಚುಳವನ್ನು ತೆರೆದ ನಿಂಗಿ ಸಾಹೇಬರಿಗೆ ಕಡಿಮೆಯಾಗಿಬಿಟ್ಟೀತು ಎಂಬ ಆತಂಕದಿಂದ ಮತ್ತೆ ಮುಚ್ಚುಳ ಮುಚ್ಚಿ ಡಬ್ಬಿಯನ್ನು ಬ್ಯಾಗಿನಲ್ಲಿಟ್ಟು 'ಬೇಗ ತಗಂಡೋಗಿ ಕೊಟ್ಟು ಬರೋಗು...' ಎಂದು ಗಂಡನ ಕೈಯ್ಯಲ್ಲಿ ಬ್ಯಾಗು ಕೊಟ್ಟು ಕಳುಹಿಸಿದಳು.

**ಮಾರನೆ ದಿನ ಬೆಳಿಗ್ಗೆ ಎದ್ದ ನಿಂಗಿಯ ಮನಸ್ಸಿಗೆ ಯಾಕೋ ಸಮಾಧಾನವಿರಲಿಲ್ಲ. 'ಮೊದ್ಲು ಸಾಹೇಬ್ರ ಹತ್ರ ಹೋಗಿ ಮಾತಾಡ್ಕಂಡು ಅಂಗೇ ಬ್ಯಾಗು, ಡಬ್ಬಿ ಇಸ್ಕಂಡು ಬರೋಗು...' ಎಂದು ಒಂದೇ ಸಮನೆ ಗೊಣಗಾಡತೊಡಗಿದಳು. ವಿಧಿಯಿಲ್ಲದೆ ಮಾದ ಸಾಹೇಬರ ಕ್ವಾಟ್ರರ್ಸ್‌ನ ಕಡೆ ಹೆಜ್ಜೆ ಹಾಕಿದ.**

ಬಿರಿಯಾನಿ ತುಂಬಿದ ಡಬ್ಬಿಯ ಹೊಸಬ್ಯಾಗು ಹಿಡಿದು ಸಾಹೇಬರ ಮನೆಯ ಕಡೆ ಹೊರಟ ಮಾದ ಸಪ್ತಗಿರಿ ವೈನ್ ಸ್ಟೋರಿನಲ್ಲಿ ಸೀನ ತಿಳಿಸಿದ ಒಂಬೈನೂರು ರೂಪಾಯಿಯ ಬಾಟ್ಲು ತೆಗೆದುಕೊಂಡು ಬಿರಬಿರನೆ ಹೆಜ್ಜೆ ಹಾಕಿ ಸಾಹೇಬರ ಕ್ವಾಟ್ರಸ್ ಬಳಿ ಬಂದ. ಇನ್ನೂ ಸಾಹೇಬರು ಬಂದಿರಲಿಲ್ಲ. ಸಾಹೇಬರು ಬರುವುದು ತಡವಾಗಿ ಬಿರಿಯಾನಿ ತಣ್ಣಗಾದರೆ ಏನು ಮಾಡುವುದೆಂದು ಚಿಂತೆಯಾಯಿತು. ಅದನ್ನೇ ಯೋಚಿಸುತ್ತಾ ಯಾರಿಗೂ ಕಾಣದಂತೆ ಬ್ಯಾಗು ಹಿಡಿದು ರಸ್ತೆಯ ಒಂದು ತುದಿಯಲ್ಲಿ ನಿಂತಿದ್ದಾಗ ದೂರದಲ್ಲಿ ಸಾಹೇಬರ ಕಾರು ಬರುತ್ತಿರುವುದು ಕಾಣಿಸಿ ಸಮಾಧಾನವಾಯಿತು. ಕಾರಿನ ಡ್ರೈವರ್ ಕಾರಿನಲ್ಲಿದ್ದ ಫೈಲುಗಳ ಕಟ್ಟನ್ನು ಮನೆಯೊಳಗೆ ಇಟ್ಟು ಕಾರನ್ನು ಶೆಡ್ಡಿನಲ್ಲಿ ನಿಲ್ಲಿಸಿ ಸೈಕಲ್ ಹತ್ತಿ ಹೊರಟುಹೋದ ಹತ್ತು ನಿಮಿಷದ ನಂತರ ಬಂದು ಕ್ವಾಟ್ರರ್ಸ್‌ನ ಮುಚ್ಚಿದ ಬಾಗಿಲು ಬಡಿದ. ಒಳಗಿನಿಂದ ಸಾಹೇಬರು, 'ಯಾರದು..' ಎಂದು ತೀಕ್ಷ್ಣ ದನಿಯಲ್ಲಿ ಕೇಳಿದರು. 'ನಾನ್ ಸಾ ಮಾದ...' ಎಂದು ಕೀರಲು ದನಿಯಲ್ಲಿ ನುಡಿದಾಗ ಬಾಗಿಲು ತೆಗೆದ ಸಾಹೇಬರು ಇವನತ್ತ ನೋಡದೆ ಮುಖಕ್ಕೆ ಪೇಪರ್ ಅಡ್ಡ ಹಿಡಿದು ಓದತೊಡಗಿದ್ದರು. ಒಳಗೆ ಹೋಗಿ ಬಿರಿಯಾನಿಯ ಬ್ಯಾಗನ್ನು ಟೀಪಾಯಿಯ ಮೇಲಿಟ್ಟು 'ಬತ್ತೀನಿ ಸಾ...' ಎಂದು ವಿನಯದಿಂದ ನುಡಿದು ಸಾಹೇಬರು ಏನೂ